# ಆತ್ಮ ನಿರ್ಭರ ಭಾರತ (ಸ್ವಾಭಿಮಾನಿ ಭಾರತ)

## ಭಾಗ -1 : ಎಂ.ಎಸ್.ಎಂ.ಇ. ಸೇರಿದಂತೆ ವಾಣಿಜ್ಯ

**13.05.2020**

सत्यमेव जयते
Government Of India



# ಪ್ರಧಾನಮಂತ್ರಿಯವರ ಮುನ್ನೋಟ

- **आत्मनिर्भर भारत अभियान** ಅಥವಾ ಸ್ವಾವಲಂಬಿ ಭಾರತದ ಅಭಿಯಾನಕ್ಕೆ ಕರೆ
- ಆತ್ಮ ನಿರ್ಭರ ಭಾರತದ ಐದು ಸ್ತಂಭಗಳು – ಆರ್ಥಿಕತೆ, ಮೂಲಸೌಕರ್ಯ, ವ್ಯವಸ್ಥೆ, ಚೈತನ್ಯಶೀಲ ಜನಸಂಖ್ಯೆ ಮತ್ತು ಬೇಡಿಕೆ.
- ಭಾರತದ ಜಿಡಿಪಿಯ ಶೇ.20ಕ್ಕೆ ಸಮನಾದ 20 ಲಕ್ಷ ಕೋಟಿ ರೂ.ಗಳ ವಿಶೇಷ ಆರ್ಥಿಕ ಮತ್ತು ಸಮಗ್ರ ಪ್ಯಾಕೇಜ್
- **ಗುಡಿ ಕೈಗಾರಿಕೆ, ಎಂ.ಎಸ್.ಎಂ.ಇಗಳು, ಕಾರ್ಮಿಕರು, ಮಧ್ಯಮ ವರ್ಗದವರು, ಕೈಗಾರಿಕೆಗಳು ಸೇರಿದಂತೆ ವಿವಿಧ ವರ್ಗಗಳಿಗೆ ಬೆಂಬಲ ನೀಡಲಿರುವ ಪ್ಯಾಕೇಜ್**
- ವಲಯಗಳಾದ್ಯಂತದ ದೃಢವಾದ ಸುಧಾರಣೆಗಳು ದೇಶವನ್ನು ಸ್ವಾವಲಂಬನೆಯತ್ತ ಮುನ್ನಡೆಸುತ್ತದೆ.
- **ಸ್ಥಳೀಯ ಉತ್ಪನ್ನಗಳಿಗೆ ಧ್ವನಿಯಾಗಲು ಮತ್ತು ಅವುಗಳನ್ನು ಜಾಗತಿಕಗೊಳಿಸಲು ಇದು ಸುಸಮಯ**



# ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಪ್ಯಾಕೇಜ್ (1)









ಕೊರೊನಾ ವೈರಾಣು ವಿರುದ್ಧ ಹೋರಾಡಲು ಬಡವರಿಗೆ ನೆರವಾಗಲು ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆ ಅಡಿಯಲ್ಲಿ1.70 ಲಕ್ಷ ಕೋಟಿ ರೂ. ಪರಿಹಾರ ಪ್ಯಾಕೇಜ್:

- **ಪ್ರತಿ ಆರೋಗ್ಯ ಕಾರ್ಯಕರ್ತರಿಗೆ50 ಲಕ್ಷ ರೂ. ವಿಮಾ ವ್ಯಾಪ್ತಿ**
- **80 ಕೋಟಿ ಬಡವರಿಗೆ ಮುಂದಿನ 3 ತಿಂಗಳುಗಳವರೆಗೆ ಪ್ರತಿ ವ್ಯಕ್ತಿಗೆ 5 ಕೆಜಿ ಗೋಧಿ ಅಥವಾ ಅಕ್ಕಿ ನೀಡಿಕೆ.**
- ಮುಂದಿನ 3 ತಿಂಗಳುಗಳ ಕಾಲ ಪ್ರತಿ ತಿಂಗಳು ಪ್ರತಿ ಕುಟುಂಬಕ್ಕೆ ಉಚಿತವಾಗಿ 1 ಕೆ.ಜಿ. ಬೇಳೆಕಾಳು
- **ಜನ್ ಧನ್ ಖಾತೆ ಹೊಂದಿರುವ 20 ಕೋಟಿ ಮಹಿಳೆಯರು ಮುಂದಿನ 3 ತಿಂಗಳುಗಳ ಕಾಲ ಪ್ರತಿ ತಿಂಗಳು 500 ರೂ. ಪಡೆಯಲಿದ್ದಾರೆ.**
- **ಉಚಿತ ಅಡುಗೆ ಅನಿಲ ಸಿಲಿಂಡರ್ ಅನ್ನು 8 ಕೋಟಿ ಬಡ ಕುಟುಂಬಗಳಿಗೆ ಮುಂದಿನ 3 ತಿಂಗಳು ಪೂರೈಸಲಾಗುತ್ತದೆ.**
- **ಮನ್ರೆಗಾ ಕೂಲಿಯಲ್ಲಿ ಹೆಚ್ಚಳ ಪ್ರತಿ ದಿನಕ್ಕೆ ರೂ.182ರಿಂದ ರೂ.202ಕ್ಕೆ ಹೆಚ್ಚಳ, 13.62 ಕೋಟಿ ಕುಟುಂಬಗಳಿಗೆ ಪ್ರಯೋಜನ**
- **3 ಕೋಟಿ ಬಡ ಹಿರಿಯ ನಾಗರಿಕರು, ಬಡ ವಿಧವೆಯರು ಮತ್ತು ಬಡ ದಿವ್ಯಾಂಗದವರಿಗೆ ರೂ.1000 ಎಕ್ಸ್ ಗ್ರೇಷಿಯಾ ಪರಿಹಾರ.**

# ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಪ್ಯಾಕೇಜ್ (2)

- 8.7 ಕೋಟಿ ರೈತರ ಪ್ರಯೋಜನಕ್ಕಾಗಿ ಹಾಲಿ ಇರುವ ಪಿಎಂ – ಕಿಸಾನ್ ಅಡಿಯಲ್ಲಿ ರೂ. 2 ಸಾವಿರ ಪಾವತಿಸಲಾಗಿದೆ.
- ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಕಲ್ಯಾಣ ನಿಧಿಯನ್ನು ಕಾರ್ಮಿಕರಿಗೆ ಪರಿಹಾರ ನೀಡಲು ಬಳಸಿಕೊಳ್ಳಲು ಅವಕಾಶ ನೀಡಲಾಗಿದೆ.
- **100ಕ್ಕಿಂತ ಕಡಿಮೆ ಕಾರ್ಮಿಕರಿರುವ ಉದ್ದಿಮೆಗಳಲ್ಲಿ 15 ಸಾವಿರಕ್ಕಿಂತ ಕಡಿಮೆ ವೇತನ ಪಡೆಯುವವರ ಪಿ.ಎಫ್. ಖಾತೆಗಳಿಗೆ ಮುಂದಿನ ಮೂರು ತಿಂಗಳುಗಳ ಕಾಲ ಮಾಸಿಕ ವೇತನದ ಶೇ.24ರಷ್ಟನ್ನು ಜಮಾ ಮಾಡಲಾಗುವುದು.**
- **ನೌಕರರ ಭವಿಷ್ಯ ನಿಧಿ ಇಪಿಎಫ್ ಅಡಿ ನೊಂದಾಯಿಸಿಕೊಂಡಿರುವ 5 ಕೋಟಿ ಕಾರ್ಮಿಕರು ತಮ್ಮ ಖಾತೆಗಳಿಂದ ಶೇ.75ರಷ್ಟು ಅಥವಾ  3ತಿಂಗಳ ವೇತನ ಯಾವುದು ಕಡಿಮೆಯೋ ಅದನ್ನು  ಮರಳಿ ಹಿಂತಿರುಗಿಸದ ಮುಂಗಡವಾಗಿ ಪಡೆಯಬಹುದು.**
- 6.85 ಕೋಟಿ ಕುಟುಂಬಗಳಿಗೆ ಬೆಂಬಲವಾಗಿರುವ ಮಹಿಳಾ ಸ್ವಸಹಾಯ ಗುಂಪುಗಳಿಗೆ ನೀಡಲಾಗುವ ಮೇಲಾಧಾರರಹಿತ ಸಾಲದ ಮಿತಿಯನ್ನು 10 ಲಕ್ಷ ರೂ.ಗಳಿಂದ 20 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ.
- ಜಿಲ್ಲಾ ಖನಿಜ ನಿಧಿ (ಡಿಎಂಎಫ್) ಅನ್ನು ವೈದ್ಯಕೀಯ ತಪಾಸಣೆ, ಪರೀಕ್ಷೆ ಇತ್ಯಾದಿಗಳ ಸೌಲಭ್ಯ ಹೆಚ್ಚಳ ಮತ್ತು ಪೂರಕವಾಗಿ ಬಳಕೆ ಮಾಡಬಹುದಾಗಿದೆ..






# ಇತರ ಕ್ರಮಗಳು- 1

- ಭಾರತ ಸರ್ಕಾರದ ಮನವಿಯ ಮೇರೆಗೆ ಆರ್.ಬಿ.ಐ. ರಾಜ್ಯಗಳ ವೇಸ್ ಮತ್ತು ಮೀನ್ಸ್ ಮುಂಗಡ ಮಿತಿಗಳನ್ನು ಶೇ.60ರಷ್ಟು ಹೆಚ್ಚಿಸಿದೆ ಮತ್ತು ಓವರ್ ಡ್ರಾಫ್ಟ್ ಅವಧಿಯ ಮಿತಿಗಳನ್ನು ಹೆಚ್ಚಿಸಿದೆ.
- 5 ಲಕ್ಷದ ವರೆಗಿನ ಬಾಕಿ ಇರುವ ಎಲ್ಲಾ ಆದಾಯ-ತೆರಿಗೆ ಮರುಪಾವತಿಗಳನ್ನು ನೀಡಲಾಗಿದ್ದು, ತಕ್ಷಣ ಸುಮಾರು 14 ಲಕ್ಷ ತೆರಿಗೆದಾರರಿಗೆ ಪ್ರಯೋಜನವಾಗಿದೆ
- ಬಾಕಿ ಇರುವ ಎಲ್ಲಾ ಮರುಪಾವತಿ ಮತ್ತು ನ್ಯೂನತೆ ಕ್ಲೇಮ್ ಗಾಗಿ "ವಿಶೇಷ ಮರುಪಾವತಿ ಮತ್ತು ನ್ಯೂನತೆಯ ವಿಲೇವಾರಿ ಡ್ರೈವ್" ಅನ್ನು ಜಾರಿ ಮಾಡಲಾಗಿದೆ
- ಮೇಲಿನ ಎರಡೂ ಕ್ರಮಗಳ ಮರು ಪಾವತಿ ಮೊತ್ತ 18,000 ಕೋಟಿ ರೂ.ಆಗುತ್ತದೆ.
- 15,000 ಕೋಟಿ ರೂ.ಗಳನ್ನು ತುರ್ತು ಆರೋಗ್ಯ ಸ್ಪಂದನಾ ಪ್ಯಾಕೇಜ್ ಗೆ ಮಂಜೂರು ಮಾಡಲಾಗಿದೆ.



# ಇತರ ಕ್ರಮಗಳು– 2

- ಶಾಸನಬದ್ಧ ಮತ್ತು ಅನುಸರಣೆಯ ವಿಚಾರಗಳಲ್ಲಿ, ಸಡಿಲಿಕೆ ನೀಡಲಾಗಿದೆ, ಅವುಗಳೆಂದರೆ–
  - ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆಯ ಕೊನೆಯ ದಿನಾಂಕ ಜೂನ್ 30, 2020ರವರೆಗೆ ವಿಸ್ತರಣೆ
  - ಜಿಎಸ್ಟಿ ರಿಟರ್ನ್ಸ್ ಸಲ್ಲಿಕೆಯ ಕೊನೆ ದಿನಾಂಕ ಜೂನ್ 2020ರ ಅಂತ್ಯಕ್ಕೆ ವಿಸ್ತರಣೆ
  - 2020ರ ಜೂನ್ 30ರವರೆಗೆ 24*7 ಕಸ್ಟಮ್ ಕ್ಲಿಯರೆನ್ಸ್
  - ಡೆಬಿಟ್ ಕಾರ್ಡ್ ಹೊಂದಿರುವವರಿಗೆ ಯಾವುದೇ ಎ.ಟಿಎಂ ಇತ್ಯಾದಿಯಿಂದ ಶುಲ್ಕವಿಲ್ಲದೆ ಹಣ ಹಿಂಪಡೆಯಲು 3ತಿಂಗಳು ವಿನಾಯಿತಿ.
  - ವಾಹನ ವಿಮೆ ಮತ್ತು ಆರೋಗ್ಯ ವಿಮೆ ಪಾಲಿಸಿಗಳಿಗೆ 2020ರ ಮೇ 15ಕ್ಕೆ ಮುನ್ನ ಪಾವತಿಗೆ ಅವಕಾಶ
  - ಕಡ್ಡಾಯ ಮಂಡಳಿ ಸಭೆಗಳನ್ನು ಸೆಪ್ಟೆಂಬರ್ 30ರವರೆಗೆ, 60 ದಿನಗಳ ಕಾಲ ವಿಸ್ತರಣೆ
  - ಸರ್ವ ಸದಸ್ಯರ ವಿಶೇಷ ಸಭೆಗಳನ್ನು ವಿಡಿಯೋ ಸಂವಾದದ ಮೂಲಕ ಇ ಮತದಾನ/ಸರಳೀಕೃತ ಮತದಾನ ವ್ಯವಸ್ಥೆಯ ಮೂಲಕ ನಡೆಸಲು ಅವಕಾಶ



## ಭಾರತೀಯ ರಿಸರ್ವ್ ಬ್ಯಾಂಕ್ ನಿಂದ ಕೈಗೊಂಡ ಕ್ರಮಗಳು

- ನಗದು ಮೀಸಲು ಅನುಪಾತ (ಸಿಆರ್ಆರ್) ಕಡಿತದಿಂದಾಗಿ ಹಣಹರಿವು **₹1,37,000**ಗೆ ಹೆಚ್ಚಳಕ್ಕೆ ಕಾರಣವಾಗಿದೆ.
- **ಹೂಡಿಕೆ ಶ್ರೇಣಿ ಸಾಂಸ್ಥಿಕ ಬಾಂಡ್ ಗಳು, ವಾಣಿಜ್ಯ ಪೇಪರ್ ಗಳು ಮತ್ತು ಪರಿವರ್ತಿಸಲಾಗದ ಡಿಬೆಂಚರ್ ಗಳಿಗಾಗಿ ₹1,00,050 ಕೋಟಿ** ನಿರ್ದಿಷ್ಟ ದೀರ್ಘಕಾಲೀನ ರೆಪೊ ಕಾರ್ಯಾಚರಣೆಗಳು (ಟಿಎಲ್‌ಟಿಆರ್‌ಒಗಳು).
- **50 ಸಾವಿರ ಕೋಟಿ ರೂ. ಟಿಎಲ್ಟಿಆರ್.ಓಗಳನ್ನು ಹೂಡಿಗೆ ದರ್ಜೆ ಬಾಂಡ್, ವಾಣಿಜ್ಯ ಪೇಪರ್ ಗಳು ಮತ್ತು ಪರಿವರ್ತನೆಯಾಗದ ಎನ್.ಬಿ.ಎಫ್.ಸಿ. ಮತ್ತು ಎಂ.ಎಫ್.ಐ.ಗಳ ಡಿಬೆಂಚರ್ ಗಳಲ್ಲಿ ಹೂಡಿಕೆ ಮಾಡಲು.**
- ಮಾರ್ಜಿನಲ್ ಸ್ಟ್ಯಾಂಡಿಂಗ್ ಫೆಸಿಲಿಟಿ (ಎಂಎಸ್ಎಫ್) ಅಡಿಯಲ್ಲಿ ಓವರ್ ನೈಟ್ ಸಾಲ ಪಡೆಯುವ ಬ್ಯಾಂಕ್ ನ ಮಿತಿಯನ್ನು ಹೆಚ್ಚಿಸಲಾಗಿದ್ದು, ಕಡಿಮೆಗೊಳಿಸಿದ ಎಂಎಸ್ಎಫ್ ದರದಲ್ಲಿ ಹೆಚ್ಚುವರಿ **₹1,37,000** ಕೋಟಿ ಲಿಕ್ವಿಡಿಟಿಯನ್ನು ಬ್ಯಾಂಕಿಂಗ್ ವ್ಯವಸ್ಥೆಗೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ.



# ಭಾರತೀಯ ರಿಜರ್ವ್ ಬ್ಯಾಂಕ್ ನಿಂದ ಕೈಗೊಂಡ ಕ್ರಮಗಳು

- ಪಾಲಿಸಿ ರೆಪೊ ದರದಲ್ಲಿ ಒಟ್ಟು ₹ 50,000 ಕೋಟಿಗೆ ನಬಾರ್ಡ್, ಸಿಡ್ಬಿ ಮತ್ತು ಎನ್ಎಚ್.ಬಿಗೆ ವಿಶೇಷ ಮರು ಹಣಕಾಸು ಸೌಲಭ್ಯಗಳನ್ನು ಘೋಷಿಸಲಾಗಿದೆ
- ತೀವ್ರವಾದ ಹಣ ಹರಿವಿನ ಒತ್ತಡವನ್ನು ನಿವಾರಿಸಲು ಮ್ಯೂಚುಯಲ್ ಫಂಡ್ ಗಳಿಗಾಗಿ ರೂ. 50,000 ಕೋಟಿಗಳ ವಿಶೇಷ ಹಣ ಹರಿವು ಸೌಲಭ್ಯವನ್ನು (ಎಸ್ಎಲ್.ಎಫ್) ತೆರೆಯುವುದಾಗಿ ಘೋಷಿಸಲಾಗಿದೆ.
- ಎಲ್ಲಾ ಅವಧಿಯ ಸಾಲಗಳಿಗೆ ಸಂಬಂಧಿಸಿದಂತೆ ಕಂತುಗಳ ಪಾವತಿ ಮತ್ತು ಕಾರ್ಯ ಬಂಡವಾಳ ಸೌಲಭ್ಯಗಳ ಮೇಲಿನ ಬಡ್ಡಿಯ ಪಾವತಿಸುವಿಕೆಗೆ ಮೂರು ತಿಂಗಳ ತಾತ್ಕಾಲಿಕ ತಡೆ.
- ಅಂತರಗಳನ್ನು ಕಡಿಮೆ ಮಾಡುವ ಮೂಲಕ ಕಾರ್ಯನಿರ್ವಹಮಾ ಬಂಡವಾಳ ಹಣಕಾಸಿನ ನೆರವು ಸರಾಗಗೊಳಿಸುವಿಕೆ
- ವಾಣಿಜ್ಯ ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ಎನ್.ಬಿಎಫ್.ಸಿ ಸಾಲಕ್ಕಾಗಿ, ವಾಣಿಜ್ಯ ಕಾರ್ಯಾಚರಣೆ ಪ್ರಾರಂಭವಾಗುವ (ಡಿಸಿಸಿಬ) ದಿನಾಂಕವನ್ನು ವಿಸ್ತರಿಸಲು ಒಂದು ವರ್ಷದ ಹೆಚ್ಚುವರಿ ಸಮಯವನ್ನು ನೀಡಲಾಗಿದೆ.



# ಎಂ.ಎಂಸ್.ಎಂ.ಇ. ಸೇರಿದಂತೆ ವಾಣಿಜ್ಯಗಳು

1. ಎಂ.ಎಸ್.ಎಂ.ಇ. ಸೇರಿದಂತೆ ವ್ಯಾಪಾರಕ್ಕೆ ಮೇಲಾಧಾರ ರಹಿತ ಸ್ವಯಂ ಸಾಲಕ್ಕಾಗಿ **3** ಲಕ್ಷ ಕೋಟಿ ರೂ.
2. ಎಂ.ಎಸ್.ಎಂ.ಇ.ಗಳಿಗೆ ರೂ. **20000** ಕೋಟಿ ಅಧೀನ ಸಾಲ
3. ಎಂ.ಎಸ್.ಎಂ.ಇ. ನಿಧಿಯ ನಿಧಿ ಮೂಲಕ ರೂ. **50,000** ಕೋಟಿ ಈಕ್ವಿಟಿ ಪೂರಣ
4. ಎಂ.ಎಸ್.ಎಂ.ಇ.ಗಳಿಗೆ ಹೊಸ ವ್ಯಾಖ್ಯೆ
5. **200** ಕೋಟಿ ರೂ.ವರೆಗಿನ ಜಾಗತಿಕ ಟೆಂಡರ್ ಗೆ ಅವಕಾಶವಿಲ್ಲ
6. ಎಂ.ಎಸ್.ಎಂ.ಇ.ಗಳಿಗೆ ಇತರ ಮಧ್ಯಸ್ಥಿಕೆಗಳು
7. ವಾಣಿಜ್ಯ ಮತ್ತು ಕಾರ್ಮಿಕರಿಗೆ ಮತ್ತೆ **3** ತಿಂಗಳು ರೂ.**2500** ಕೋಟಿ ರೂ. ಇಪಿಎಫ್ ಬೆಂಬಲ
8. ಇಪಿಎಫ್ ವಂತಿಗೆಯನ್ನು ವಾಣಿಜ್ಯ ಮತ್ತು ಕಾರ್ಮಿಕರಿಗೆ **3** ತಿಂಗಳುಗಳ ಕಾಲ ತಗ್ಗಿಸಲಾಗಿದೆ – ರೂ. **6750** ಕೋಟಿ

**9.** ಎನ್.ಬಿ.ಎಫ್.ಸಿ./ಎಚ್.ಸಿ.ಗಳು/ಎಂ.ಎಫ್.ಐ.ಗಳಿಗೆ ರೂ. **30,000** ಕೋಟಿ ಲಿಕ್ವಿಡಿಟಿ ಸೌಲಭ್ಯ

**10.**ಎನ್.ಬಿ.ಎಫ್.ಸಿ.ಗಳಿಗೆ ರೂ. **45,000** ಕೋಟಿ ಭಾಗಶಃ ಸಾಲ ಖಾತ್ರಿ ಯೋಜನೆ

**11.**ಡಿಸ್ಕಾಂಗಳಿಗೆ ರೂ.**90000** ಕೋಟಿ ಲಿಕ್ವಿಡಿಟಿ ಸೇರ್ಪಡೆ

**12.**ಗುತ್ತಿಗೆದಾರರಿಗೆ ಪರಿಹಾರ

**13.**ರೇರಾ ಅಡಿಯಲ್ಲಿ ಯೋಜನೆಗಳ ನೋಂದಣಿ ಮತ್ತು ಪೂರ್ಣಗೊಳಿಸುವ ದಿನಾಂಕದ ವಿಸ್ತರಣೆ

**14.**ಟಿಡಿಎಸ್/ಡಿಸಿಎಸ್ ತಗ್ಗಿಸುವ ಮೂಲಕ ರೂ. **50,000** ಕೋಟಿ ಲಿಕ್ವಿಡಿಟಿ

**15.**ಇತರ ನೇರ ತೆರಿಗೆ ಕ್ರಮಗಳು

**16.**ಇತರ ನೇರ ತೆರಿಗೆ ಕ್ರಮಗಳು

**ಎಂ.ಎಸ್.ಎಂ.ಇ. ಸೇರಿದಂತೆ ವಾಣಿಜ್ಯಕ್ಕೆ ರೂ. 3 ಲಕ್ಷ ಕೋಟಿ ಮೇಲಾಧಾರ ರಹಿತ ಸ್ವಯಂ ಸಾಲ**

- ವಾಣಿಜ್ಯ /ಎಂ.ಎಸ್.ಎಂ.ಇ.ಗಳು ಕೋವಿಡ್ 19ರಿಂದ ತೀವ್ರ ತತ್ತರಿಸಿದ್ದು, ಕಾರ್ಯಾಚರಣೆಯ ಋಣಗಳು, ಕಚ್ಚಾ ವಸ್ತು ಖರೀದಿ ಮತ್ತು ವಾಣಿಜ್ಯ ಪುನಾರಂಭಕ್ಕೆ ಅವುಗಳಿಗೆ ಹೆಚ್ಚುವರಿ ಹಣಕಾಸಿನ ಅಗತ್ಯವಿದೆ.
- **ನಿರ್ಧಾರ**: ವಾಣಿಜ್ಯ/ಎಂ.ಎಸ್.ಎಂ.ಇ.ಗಳಿಗೆ ಬ್ಯಾಂಕ್ ಗಳು ಮತ್ತು ಎನ್.ಬಿ.ಎಫ್.ಸಿ.ಗಳಿಂದ 29.2.2020ರವರಗೆ ಇರುವ ಒಟ್ಟು ಬಾಕಿ ಸಾಲದ ಮೇಲೆ ಶೇ.20ರಷ್ಟು ತುರ್ತು ಕ್ರೆಡಿಟ್ ಲೈನ್
- 25 ಕೋಟಿ ರೂ.ವರೆಗೆ ಬಾಕಿ ಉಳಿಸಿಕೊಂಡಿರುವ ಸಾಲಗಾರರು ಮತ್ತು 100 ಕೋಟಿ ವಹಿವಾಟು ಹೊಂದಿರುವವರು ಇದಕ್ಕೆ ಅರ್ಹರು.
- ಅಸಲಿನ ಮರುಪಾವತಿಯಲ್ಲಿ 12 ತಿಂಗಳ ತಾತ್ಕಾಲಿಕ ಮುಂದೂಡಿಕೆ ಮತ್ತು 4 ವರ್ಷದ ಅವಧಿ ಹೊಂದಿದ ಸಾಲಗಳು
- ಬಡ್ಡಿಗೆ ಮಿತಿ
- ಬ್ಯಾಂಕ್ ಮತ್ತು ಎನ್.ಬಿ.ಎಫ್.ಸಿ.ಗಳಿಗೆ ಅಸಲು ಮತ್ತು ಬಡ್ಡಿಯ ಮೇಲೆ ಶೇ.100 ಸಾಲದ ಖಾತ್ರಿ ವ್ಯಾಪ್ತಿ
- 2020ರ ಅಕ್ಟೋಬರ್ 31ರವರೆಗೆ ಯೋಜನೆಯಲ್ಲಿ ಪಡೆಯಬಹುದು.
- ಖಾತ್ರಿ ಶುಲ್ಕವಿಲ್ಲ, ಹೊಸ ಮೇಲಾಧಾರವೂ ಇಲ್ಲ.
- **45 ಲಕ್ಷ ಘಟಕಗಳು ವಾಣಿಜ್ಯ ಚಟುವಟಿಕೆ ಪುನಾರಂಭಿಸಲು ಮತ್ತು ಉದ್ಯೋಗ ಉಳಿಸಲು.**



# ಒತ್ತಡದಲ್ಲಿನ ಎಂ.ಎಸ್.ಎಂ.ಇ.ಗಳಿಗೆ ರೂ. 20,000 ಕೋಟಿ ಅಧೀನ ಸಾಲ




- ಒತ್ತಡದಲ್ಲಿರುವ ಎಂ.ಎಸ್.ಎಂ.ಇ.ಗಳಿಗೆ ಈಕ್ವಿಟಿ ಬೆಂಬಲ ಅಗತ್ಯ
- ಭಾರತ ಸರ್ಕಾರ ರೂ.20000 ಕೋಟಿ ಅಧೀನ ಸಾಲಕ್ಕೆ ಅವಕಾಶ ಕಲ್ಪಿಸಿದೆ.
- ಎರಡು ಲಕ್ಷ ಎಂ.ಎಸ್.ಎಂ.ಇ.ಗಳಿಗೆ ಇದರಿಂದ ಪ್ರಯೋಜನವಾಗಲಿದೆ
- ಎನ್.ಪಿ.ಎ. ಅಥವಾ ಒತ್ತಡದಲ್ಲರುವ ಕಾರ್ಯನಿರತ ಎಂ.ಎಸ್.ಎಂ.ಇ.ಗಳು ಅರ್ಹರು.
- **ಸಿಜಿಟಿಎಂಎಸ್.ಇ.ಗಳಿಗೆ ಸರ್ಕಾರ ರೂ. 4000 ಕೋಟಿ ಬೆಂಬಲ ಒದಗಿಸುತ್ತದೆ**
- ಸಿಜಿಟಿಎಂಎಸ್.ಇ ಬ್ಯಾಂಕ್ ಗಳಿಗೆ ಭಾಗಶಃ ಸಾಲದ ಮೇಲೆ ಖಾತ್ರಿ ಬೆಂಬಲ ನೀಡುತ್ತದೆ.
- ಎಂಎಸ್ಎಂಇಯ ಪ್ರವರ್ತಕರಿಗೆ ಬ್ಯಾಂಕುಗಳು ಸಾಲವನ್ನು ನೀಡುತ್ತವೆ, ನಂತರ ಅದನ್ನು ಪ್ರವರ್ತಕರಿಂದ ಘಟಕದಲ್ಲಿ ಈಕ್ವಿಟಿಯಾಗಿ ತುಂಬಿಸಲಾಗುತ್ತದೆ..

# ಎಂ.ಎಸ್.ಎಂ.ಇ.ಗಳಿಗೆ ನಿಧಿಯ ನಿಧಿಯಿಂದ ರೂ. 50,000 ಕೋಟಿ ಈಕ್ವಿಟಿಯ ಪೂರಣ

- ಎಂ.ಎಸ್.ಎಂ.ಇ.ಗಳು ಈಕ್ವಿಟಿಯ ತೀವ್ರ ಕೊರತೆ ಎದುರಿಸುತ್ತಿವೆ.
- 10000 ಕೋಟಿ ರೂ. ಕಾಪು ನಿಧಿಯೊಂದಿಗೆ ನಿಧಿಯ ನಿಧಿಯನ್ನು ಸ್ಥಾಪಿಸಲಾಗುತ್ತಿದೆ.
- ಬೆಳವಣಿಗೆಯ ಸಾಮರ್ಥ್ಯ ಮತ್ತು ಕಾರ್ಯಸಾಧ್ಯತೆಯೊಂದಿಗೆ ಎಂಎಸ್.ಎಂಇಗಳಿಗೆ ಈಕ್ವಿಟಿ ಹಣವನ್ನು ಒದಗಿಸಲಾಗುತ್ತದೆ.
- ನಿಧಿಯ ನಿಧಿಯನ್ನು ಮದರ್ ಫಂಡ್ ಮತ್ತು ಕೆಲವು ಡಾಟರ್ ಫಂಡ್ ಮೂಲಕ ಕಾರ್ಯಾಚರಣೆ ಮಾಡಲಾಗುತ್ತದೆ.
- ನಿಧಿಯ ಸ್ವರೂಪವು ರೂ. 50000 ಕೋಟಿಯನ್ನು ಡಾಟರ್ ಫಂಡ್ ಮಟ್ಟದ ನಿಧಿಯಿಂದ ನಿಯಂತ್ರಿಸಲು ನೆರವಾಗುತ್ತದೆ.
- **ಎಂಎಸ್.ಎಂಇ.ಗಳ ಗಾತ್ರ ಮತ್ತು ಸಾಮರ್ಥ್ಯವನ್ನು ವಿಸ್ತರಿಸಲು ನೆರವಾಗುತ್ತದೆ**
- **ಎಂ.ಎಸ್.ಎಂ.ಇ.ಗಳು ಶೇರು ಪೇಟೆಯ ಪ್ರಧಾನ ಬೋರ್ಡ್ ನಲ್ಲಿ ಲಿಸ್ಟ್ ಆಗಲು ಪ್ರೋತ್ಸಾಹಿಸುತ್ತದೆ.**



# ಎಂ.ಎಸ್.ಎಂ.ಇ.ಯ ಹೊಸ ವ್ಯಾಖ್ಯೆ

- ಎಂಎಸ್.ಎಂಇ ವ್ಯಾಖ್ಯಾನದಲ್ಲಿನ ಅಲ್ಪ ಮಿತಿ ಎಂಎಸ್.ಎಂಇಗಳಲ್ಲಿ ಪ್ರಯೋಜನಗಳನ್ನು ಪಡೆದು ಹೊರಬರುವ ಭೀತಿಯನ್ನು ಸೃಷ್ಟಿಸಿದ್ದು, ಅದರಿಂದ ಬೆಳೆಯುವ ಹಂಬಲವನ್ನೇ ಕೊಲ್ಲುತ್ತದೆ.
- ಪರಿಷ್ಕರಣೆಗಾಗಿ ದೀರ್ಘಕಾಲದಿಂದ ಬೇಡಿಕೆ ಇದೆ.

**ಪ್ರಕಟಣೆ:**

- ಎಂ.ಎಸ್.ಎಂ.ಇ.ಯ ವ್ಯಾಖ್ಯೆಯನ್ನು ಪರಿಷ್ಕರಿಸಲಾಗಿದೆ.
- ಹೂಡಿಕೆಯ ಮಿತಿ ಮೇಲ್ಮುಖವಾಗಿ ಪರಿಷ್ಕರಿಸಲಾಗುತ್ತದೆ.
- ವಹಿವಾಟಿಗೆ ಹೆಚ್ಚುವರಿ ಮಾನದಂಡವನ್ನು ಪರಿಚಯಿಸಲಾಗಿದೆ.
- **ಉತ್ಪಾದನೆ ಮತ್ತು ಸೇವಾ ಕ್ಷೇತ್ರದ ನಡುವಿನ ವ್ಯತ್ಯಾಸವನ್ನು ತೆಗೆದುಹಾಕಬೇಕಿದೆ.**
- ಕಾನೂನಿಗೆ ಅಗತ್ಯ ತಿದ್ದುಪಡಿಗಳನ್ನು ತರಲಾಗುವುದು.



# ಎಂ.ಎಸ್.ಎಂ.ಇ.ಗಳ  ಹಾಲಿ ಹಾಗೂ ಪರಿಷ್ಕೃತ ವ್ಯಾಖ್ಯೆ

सत्यमेव जयते
Goverment Of India

| ಹಾಲಿ ಎಂ.ಎಸ್.ಎಂ.ಇ.ಗಳ ವರ್ಗೀಕರಣ | | | |
|---|---|---|---|
| ಮಾನದಂಡ: ಘಟಕ ಮತ್ತು ಯಂತ್ರ ಅಥವಾ ಸಲಕರಣೆಯಲ್ಲಿನ ಹೂಡಿಕೆ | | | |
| ವರ್ಗೀಕರಣ | ಸೂಕ್ಷ್ಮ | ಸಣ್ಣ | ಮಧ್ಯಮ |
| ಉತ್ಪಾದನಾ ಉದ್ದಿಮೆ. | ಹೂಡಿಕೆ <ರೂ. 25 ಲಕ್ಷ | ಹೂಡಿಕೆ<ರೂ. 5 ಕೋಟಿ | ಹೂಡಿಕೆ <ರೂ. 10 ಕೋಟಿ. |
| ಸೇವಾ ಉದ್ದಿಮೆಗಳು | ಹೂಡಿಕೆ<ರೂ. 10 ಲಕ್ಷ | ಹೂಡಿಕೆ< ರೂ. 2 ಕೋಟಿ | ಹೂಡಿಕೆ<ರೂ. 5 ಕೋಟಿ. |

| ಪರಿಷ್ಕೃತ ಎಂ.ಎಸ್.ಎಂ.ಇ.ಗಳ ವರ್ಗೀಕರಣ | | | |
|---|---|---|---|
| ಸಂಯೋಜಿತ ಮಾನದಂಡಗಳು: ಹೂಡಿಕೆ ಮತ್ತು ವಾರ್ಷಿಕ ವಹಿವಾಟು | | | |
| ವರ್ಗೀಕರಣ | ಸೂಕ್ಷ್ಮ | ಸಣ್ಣ | ಮಧ್ಯಮ |
| ಉತ್ಪಾದನೆ ಮತ್ತು ಸೇವೆಗಳು | ಹೂಡಿಕೆ< Rs. 1 cr.<br>ಮತ್ತು<br>ವಹಿವಾಟು < ರೂ..5 ಕೋಟಿ. | ಹೂಡಿಕೆ< ರೂ.. 10 ಕೋಟಿ.<br>ಮತ್ತು<br>ವಹಿವಾಟು< ರೂ.50 ಕೋಟಿ. | ಹೂಡಿಕೆ< ರೂ. 20 ಕೋಟಿ.<br>ಮತ್ತು<br>ವಹಿವಾಟು < ರೂ.100 ಕೋಟಿ. |

# 200 ಕೋಟಿ ರೂ. ವರೆಗಿನ ಜಾಗತಿಕ ಟೆಂಡರುಗಳಿಗೆ ಅವಕಾಶವಿಲ್ಲ.

- ಭಾರತೀಯ ಎಂ.ಎಸ್.ಎಂ.ಇ.ಗಳು ಮತ್ತು ಇತರ ಕಂಪನಿಗಳು ಪದೇಪದೇ ವಿದೇಶೀ ಕಂಪನಿಗಳ ನ್ಯಾಯಸಮ್ಮತವಲ್ಲದ ಸ್ಪರ್ಧೆಯನ್ನು ಎದುರಿಸಿವೆ.
- ಹೀಗಾಗಿ, 200 ಕೋಟಿ ರೂ.ವರೆಗಿನ ಸರ್ಕಾರಿ ದಾಸ್ತಾನು ಟೆಂಡರುಗಳಲ್ಲಿ ಜಾಗತಿಕ ಟೆಂದರುಗಳಿಗೆ ಅವಕಾಶವಿಲ್ಲ.
- **ಸಾಮಾನ್ಯ ಹಣಕಾಸು ನಿಯಮಗಳಿಗೆ ಅಗತ್ಯ ತಿದ್ದುಪಡಿಯು ಪರಿಣಾಮ ಬೀರುತ್ತದೆ.**
- **ಇದು ಸ್ವಾವಲಂಬಿ ಭಾರತ (आत्मनिर्भर भारत)ದತ್ತ ಮುಂದಡಿಯಾಗಿದೆ ಮತ್ತು ಮೇಕ್ ಇನ್ ಇಂಡಿಯಾಗೆ ಬೆಂಬಲ ನೀಡುತ್ತದೆ.**
- **ಇದು ಎಂ.ಎಸ್.ಎಂ.ಇ.ಗಳಿಗೆ ತಮ್ಮ ವಾಣಿಜ್ಯ ಹೆಚ್ಚಿಸಿಕೊಳ್ಳಲೂ ನೆರವಾಗುತ್ತದೆ.**



# ಎಂ.ಎಸ್.ಎಂ.ಇ.ಗಳಿಗೆ ಇತರ ಮಧ್ಯಸ್ಥಿಕೆಗಳು

- ಎಂ.ಎಸ್.ಎಂ.ಇ.ಗಳು ಪ್ರಸ್ತುತ ಕೋವಿಡ್ ನಿಂದ ಲಿಕ್ವಿಡಿಟಿ ಮತ್ತು ಮಾರುಕಟ್ಟೆಯ ಸಮಸ್ಯೆ ಎದುರಿಸುತ್ತಿವೆ.
- ವಾಣಿಜ್ಯ ಮೇಳ ಮತ್ತು ವಸ್ತು ಪ್ರದರ್ಶನಕ್ಕೆ ಬದಲಾಗಿ ಕಾರ್ಯನಿರ್ವಹಿಸುವಂತೆ ಎಂ.ಎಸ್.ಎಂ.ಇ.ಗಳಿಗೆ ಇ-ಮಾರುಕಟ್ಟೆ ಸಂಪರ್ಕ ಉತ್ತೇಜಿಸಬೇಕು
- ಈ ಮಾರುಕಟ್ಟೆ ತಾಣದಲ್ಲಿ ಸೃಷ್ಟಿಯಾದ ದತ್ತಾಂಶ ಬಳಸಿ ವಹಿವಾಟು ಆಧಾರಿತ ಸಾಲ ನೀಡಿಕೆ ಹೆಚ್ಚಳಕ್ಕೆ ಫಿನ್ ಟೆಕ್ ಬಳಕೆ.
- ಎಂ.ಎಸ್.ಎಂ.ಇ. ವೆಂಡರುಗಳಿಗೆ ಸರ್ಕಾರದಿಂದ ಮತ್ತು ಕೇಂದ್ರ ಸಾರ್ವಜನಿಕ ವಲಯದ ಉದ್ದಮೆಗಳಿಂದ ಬರಬೇಕಾದ ಬಾಕಿ ಪಾವತಿ ಇತ್ಯರ್ಥದ ಬಗ್ಗೆ ಸರ್ಕಾರ ನಿರಂತರವಾಗಿ ನಿಗಾ ವಹಿಸಿದೆ.
- ಸರ್ಕಾರ ಮತ್ತು ಸಿಪಿಎಸ್ಇಗಳಿಂದ ಎಂಎಸ್ಎಂಇ ಪಡೆಯಬೇಕಾದ್ದನ್ನು 45 ದಿನಗಳಲ್ಲಿ ಬಿಡುಗಡೆಯಾಗಲಿದೆ



# ವಾಣಿಜ್ಯ ಮತ್ತು ಕಾರ್ಮಿಕರಿಗೆ 3 ತಿಂಗಳುಗಳ ಕಾಲ ರೂ. 2500 ಕೋಟಿ ಇಪಿಎಫ್ ಬೆಂಬಲ

- ವಾಣಿಜ್ಯಗಳು ಮರಳಿ ಕೆಲಸಕ್ಕೆ ಮರಳಿದಾಗ ಅವರಿಗೆ ಹಣಕಾಸು ಒತ್ತಡ ಇರುತ್ತದೆ.
- ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಪ್ಯಾಕೇಜ್ (ಪಿಎಂಜಿಕೆಪಿ) ಅಡಿಯಲ್ಲಿ, ಅರ್ಹ ಉದ್ಯಮಗಳ ಮಾಲೀಕರ ಶೇ.12 ಮತ್ತು ನೌಕರರ ಶೇ.12 ವಂತಿಕೆಯನ್ನು ಇಪಿಎಫ್ ಖಾತೆಗಳಿಗೆ ಪಾವತಿ ಮಾಡಲಾಗುತ್ತದೆ.
- ಈ ಹಿಂದೆ ಇದನ್ನು 2020ರ ಮಾರ್ಚ್, ಏಪ್ರಿಲ್ ಮತ್ತು ಮೇ ವೇತನ ಮಾಸಕ್ಕೆ ಒದಗಿಸಲಾಗಿತ್ತು.
- ಈ ಬೆಂಬಲವನ್ನು ಮತ್ತೆ 3 ತಿಂಗಳು ಅಂದರೆ 2020ರ ಜೂನ್, ಜುಲೈ ಮತ್ತು ಆಗಸ್ಟ್ ವೇತನ ಮಾಸಕ್ಕೂ ವಿಸ್ತರಿಸಲಾಗಿದೆ.
- **ಇದು 3.67 ಲಕ್ಷ ಉದ್ದಿಮೆಗಳಿಗೆ ಮತ್ತು 72.22 ಲಕ್ಷ ಉದ್ಯೋಗಿಗಳಿಗೆ ರೂ.2500 ಕೋಟಿ ಪರಿಹಾರ ಒದಗಿಸುತ್ತದೆ.**



# ವಾಣಿಜ್ಯ ಮತ್ತು ಕಾರ್ಮಿಕರಿಗೆ 3 ತಿಂಗಳಿಗೆ ಇಪಿಎಫ್ ವಂತಿಗಾಗಿ ರೂ. 6750 ಕೋಟಿ ಲಿಕ್ವಿಡಿಟಿ ಬೆಂಬಲ

- ಮುಂದಿನ ತ್ರೈಮಾಸಿಕದಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ವ್ಯಾಪಾರಗಳಿಗೆ ಬೆಂಬಲ ಅಗತ್ಯ
- ಉದ್ಯೋಗಿಗಳಿಗೆ ಹೆಚ್ಚಿನ ಸಂಬಳವನ್ನು ಮನೆಗೆ ತೆಗೆದುಕೊಂಡು ಹೋಗಲು ಮತ್ತು ಭವಿಷ್ಯ ನಿಧಿ ಬಾಕಿ ಪಾವತಿಸುವಲ್ಲಿ ಉದ್ಯೋಗದಾತರಿಗೆ ಪರಿಹಾರ ಒದಗಿಸುವುದು ಅವಶ್ಯಕವಾಗಿದೆ.
- ಆದ್ದರಿಂದ, ಮುಂದಿನ 3 ತಿಂಗಳವರೆಗೆ ಇಪಿಎಫ್ಒ ವ್ಯಾಪ್ತಿಗೆ ಬರುವ ಎಲ್ಲಾ ಸಂಸ್ಥೆಗಳಿಗೆ ಉದ್ಯೋಗದಾತ ಮತ್ತು ಉದ್ಯೋಗಿ ಇಬ್ಬರ ಶಾಸನಬದ್ಧ ಪಿಎಫ್ ಕೊಡುಗೆಯನ್ನು ಅಸ್ತಿತ್ವದಲ್ಲಿರುವ ಶೇ.12 ರಿಂದ ತಲಾ ಶೇ.10 ಕ್ಕೆ ಇಳಿಸಲಾಗುತ್ತದೆ
- ಆದಾಗ್ಯೂ ಸಿಪಿಎಸ್.ಇ ಮತ್ತು ರಾಜ್ಯ ಪಿಎಸ್.ಯು ಶೇ.12ರಷ್ಟು ಮಾಲೀಕರ ವಂತಿಗೆ ನೀಡಿಕೆ ಮುಂದುವರಿಸುತ್ತದೆ.
- ಈ ಯೋಜನೆ ಶೇ.24ರಷ್ಟು ಇಪಿಎಫ್ ಅರ್ಹತೆ ಇಲ್ಲದ ಕಾರ್ಮಿಕರಿಗೂ ಪಿಎಂ ಗರೀಬ್ ಕಲ್ಯಾಣ್ ಪ್ಯಾಕೇಜ್ ಮತ್ತು ಅದರ ವಿಸ್ತರಣೆಯಡಿ ಅನ್ವಯಿಸುತ್ತದೆ
- **ಇದು ಇಪಿಎಫ್.ಎ ವ್ಯಾಪ್ತಿಯ 6.5 ಲಕ್ಷ  ಸ್ಥಾಪನೆಗಳಿಗೆ ಮತ್ತು 4.3 ಕೋಟಿ ಅಂಥ ನೌಕರರಿಗೆ ಪರಿಹಾರ ಒದಗಿಸುತ್ತದೆ**
- ಇದು 3 ತಿಂಗಳುಗಳ ಕಾಲ ಮಾಲಿಕರು ಮತ್ತು ನೌಕರರಿಗೆ 6750 ಕೋಟಿ ರೂ. ಲಿಕ್ವಿಡಿಟಿ ಒದಗಿಸುತ್ತದೆ.



**ಎನ್.ಬಿ.ಎಫ್.ಸಿ.ಗಳು/ ಎಚ್.ಎಫ್.ಸಿ.ಗಳು/ಎಂ.ಎಫ್.ಐ.ಗಳಿಗೆ ರೂ. 30,000 ಕೋಟಿ ವಿಶೇಷ ಲಿಕ್ವಿಡಿಟಿ ಯೋಜನೆ**

- ಎನ್.ಬಿ.ಎಫ್.ಸಿ.ಗಳು/ ಎಚ್.ಎಫ್.ಸಿ.ಗಳು/ಎಂ.ಎಫ್.ಐ.ಗಳಿಗೆ ಸಾಲ ಮಾರುಕಟ್ಟೆಯಲ್ಲಿ ಹಣ ಹೊಂದಿಸುವುದು ಕಷ್ಟವಾಗುತ್ತಿದೆ
- ಸರ್ಕಾರ 30000 ಕೋಟಿ ರೂ. ವಿಶೇಷ ಲಿಕ್ವಿಡಿಟಿ ಯೋಜನೆ ಆರಂಭಿಸಿದೆ.
- ಈ ಯೋಜನೆಯಡಿ **ಎನ್.ಬಿ.ಎಫ್.ಸಿ.ಗಳು/ ಎಚ್.ಎಫ್.ಸಿ.ಗಳು/ ಎಂ.ಎಫ್.ಐ.ಗಳ** ಹೂಡಿಕೆ ದರ್ಜೆ ಸಾಲ ಪತ್ರದ ಹೂಡಿಕೆಯನ್ನು ಪ್ರಾಥಮಿಕ ಮತ್ತು ಎರಡನೇ ಹಂತದ ಮಾರುಕಟ್ಟೆ ವಹಿವಾಟಿನಲ್ಲಿ ಮಾಡಲಾಗುತ್ತದೆ.
- ಇದು ಲಿಕ್ವಿಡಿಟಿ ಹೆಚ್ಚಿಸುವ ಆರ್.ಬಿ.ಐ/ಸರ್ಕಾರದ ಕ್ರಮಗಳಿಗೆ ಪೂರಕವಾಗಿದೆ
- ಭದ್ರತೆಗಳಿಗೆ ಸರ್ಕಾರದಿಂದ ಪೂರ್ಣ ಖಾತ್ರಿ ಇರುತ್ತದೆ.
- ಇದು ಎನ್.ಬಿ.ಎಫ್.ಸಿ.ಗಳು/ ಎಚ್.ಎಫ್.ಸಿ.ಗಳು/ಎಂ.ಎಫ್.ಐ.ಗಳಿಗೆ ಲಿಕ್ವಿಡಿಟಿ ಬೆಂಬಲ ಒದಗಿಸುತ್ತದೆ ಮತ್ತು ಮಾರುಕಟ್ಟೆಯಲ್ಲಿ ವಿಶ್ವಾಸ ಮೂಡಿಸುತ್ತದೆ.



# ಎನ್.ಬಿ.ಎಫ್.ಸಿ.ಗಳಿಗೆ ರೂ. 45,000 ಕೋಟಿ ಭಾಗಶಃ ಸಾಲ ಖಾತ್ರಿ ಯೋಜನೆ

- ಕಡಿಮೆ ಸಾಲದ ಶ್ರೇಯಾಂಕ ಹೊಂದಿರುವ ಎನ್.ಬಿಎಫ್.ಸಿಗಳು, ಎಚ್.ಎಫ್.ಸಿಗಳು ಮತ್ತು ಎಂಎಫ್ಐಗಳು ಎಂಎಸ್ಎಂಇ ಗಳು ಮತ್ತು ವ್ಯಕ್ತಿಗಳಿಗೆ ಹೊಸ ಸಾಲ ನೀಡಲು ಲಿಕ್ವಿಡಿಟಿ ಅಗತ್ಯವಿರುತ್ತದೆ
- ಹಾಲಿ ಪಿಸಿಜಿಎಸ್ ಯೋಜನೆಯನ್ನು ಅಂತಹ ಘಟಕಗಳ ಬಾಂಡ್ / ಸಿಪಿಗಳ ಪ್ರಾಥಮಿಕ ವಿತರಣೆ (ಬ್ಯಾಲೆನ್ಸ್ ಶೀಟ್‌ಗಳ ಹೊಣೆಗಾರಿಕೆ ಭಾಗ) ನಂತಹ ಸಾಲಗಳನ್ನು ಸರಿದೂಗಿಸಲು ವಿಸ್ತರಿಸಲಾಗುವುದು.
- ಮೊದಲ ಶೇ.20 ನಷ್ಟವನ್ನು ಖಾತರಿದಾರರು ಅಂದರೆ ಭಾರತ ಸರ್ಕಾರ ಭರಿಸಲಿದೆ.
- ಎಎ ಕಾಗದ ಮತ್ತು ಶ್ರೇಯಾಂಕವಿಲ್ಲದ ಕಾಗದ ಪತ್ರ ಸೇರಿದಂತೆ ಕೆಳಗಿನ ಕಾಗದಪತ್ರ ಹೂಡಿಕೆಗೆ ಅರ್ಹವಾಗಿದೆ (ಎಸ್‌ಪಿ. ಅನೇಕ ಎಂಎಫ್ಐಗಳಿಗೆ ಸಂಬಂಧಿಸಿದೆ)
- ಈ ಯೋಜನೆ ರೂ. 45,000 ಕೋಟಿ ಲಿಕ್ವಿಡಿಟಿಗೆ ಕಾರಣವಾಗುತ್ತದೆ.



# ಡಿಸ್ಕಾಂಗಳಿಗೆ ರೂ. 90,000 ಕೋಟಿ ಲಿಕ್ವಿಡಿಟಿ ಪೂರಣ

ವಿದ್ಯುತ್ ಪ್ರಸರಣ ಕಂಪನಿಗಳ (ಡಿಸ್ಕಾಂಗಳು) ಆದಾಯ ಕುಸಿತ
ಬೇಡಿಕೆ ಕುಸಿತದಿಂದ ಎದ್ದು ಕಾಣುವಂಥ ಅಭೂತಪೂರ್ವ ಹಣದ ಹರಿವಿನ ಸಮಸ್ಯೆ
ಡಿಸ್ಕಾಮ್ ಗಳು ವಿದ್ಯುತ್ ಉತ್ಪಾದನೆ ಮತ್ತು ಪ್ರಸರಣ ಕಂಪನಿಗಳಿಗೆ ಪಾವತಿಸಬೇಕಾದ ಪ್ರಸ್ತುತ ~ 94,000 ಕೋಟಿ ರೂ
ಪಿಎಫ್‌ಸಿ / ಆರ್‌ಇಸಿಗಳು ಸ್ವೀಕೃತಿಗಳ ಪ್ರತಿಯಾಗಿ ಡಿಸ್ಕಾಮ್‌ಗಳಿಗೆ 90,000 ಕೋಟಿ ರೂ.ಗಳ ಹಣ ಹರಿವು ತುಂಬಲಿವೆ
**ಡಿಸ್ಕಾಮ್‌ಗಳ ಹೊಣೆಗಾರಿಕೆಗಳನ್ನು ಜೆಂಕೋಸ್ ಗೆ ಬಿಡುಗಡೆ ಮಾಡುವ ವಿಶೇಷ ಉದ್ದೇಶದ ಸಾಲಗಳನ್ನು ರಾಜ್ಯ ಸರ್ಕಾರಗಳ ಖಾತ್ರಿಗೆ ಪ್ರತಿಯಾಗಿ ನೀಡಲಾಗುವುದು**
ನಿರ್ದಿಷ್ಟ ಚಟುವಟಿಕೆಗಳಿಗೆ / ಸುಧಾರಣೆಗಳಿಗೆ ಸಂಪರ್ಕ: ಗ್ರಾಹಕರಿಗೆ ಡಿಸ್ಕಾಮ್ ಗಳಿಂದ ಡಿಜಿಟಲ್ ಪಾವತಿ ಸೌಲಭ್ಯ, ರಾಜ್ಯ ಸರ್ಕಾರಗಳ ಬಾಕಿ ಹಣವನ್ನು, ಆರ್ಥಿಕ ಮತ್ತು ಕಾರ್ಯಾಚರಣೆಯ ನಷ್ಟವನ್ನು ಕಡಿಮೆ ಮಾಡಲು ಯೋಜಿಸಲಾಗಿದೆ.
ಕೇಂದ್ರ ಸಾರ್ವಜನಿಕ ವಲಯದ ಉತ್ಪಾದನಾ ಕಂಪನಿಗಳು ಡಿಸ್ಕಾಮ್ ಗಳಿಗೆ ರಿಯಾಯಿತಿ ನೀಡುತ್ತವೆ, ಅದನ್ನು ಅಂತಿಮವಾಗಿ ಗ್ರಾಹಕರಿಗೆ (ಕೈಗಾರಿಕೆಗಳಿಗೆ) ತಲುಪಿಸಲಾಗುತ್ತದೆ.



# ಗುತ್ತಿಗೆದಾರರಿಗೆ ಪರಿಹಾರ

- ಎಲ್ಲಾ ಕೇಂದ್ರ ಏಜೆನ್ಸಿಗಳಿಂದ (ರೈಲ್ವೆ, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ಕೇಂದ್ರ ಲೋಕೋಪಯೋಗಿ ಇಲಾಖೆ, ಇತ್ಯಾದಿ) 6 ತಿಂಗಳವರೆಗೆ (ಗುತ್ತಿಗೆದಾರರಿಗೆ ವೆಚ್ಚವಿಲ್ಲದೆ) ವಿಸ್ತರಣೆ ಒದಗಿಸಲಾಗುವುದು.
- ನಿರ್ಮಾಣ/ಕಾಮಗಾರಿ ಮತ್ತು ಸರಕು ಮತ್ತು ಸೇವೆಗಳ ಗುತ್ತಿಗೆದಾರರಿಗೆ ಅನ್ವಯಿಸುತ್ತದೆ
- ಕಾಮಗಾರಿ ಪೂರ್ಣಗೊಳಿಸುವಿಕೆ, ಮಧ್ಯಂತರ ಮೈಲಿಗಲ್ಲುಗಳು ಮತ್ತು ಪಿಪಿಪಿ ಒಪ್ಪಂದಗಳಲ್ಲಿ ರಿಯಾಯಿತಿ ಅವಧಿಯ ವಿಸ್ತರಣೆಯಂತಹ ಜವಾಬ್ದಾರಿಗಳನ್ನು ಒಳಗೊಂಡಿರುತ್ತದೆ
- ನಗದು ಹರಿವನ್ನು ಸರಾಗಗೊಳಿಸುವ ಸಲುವಾಗಿ, ಸರ್ಕಾರಿ ಸಂಸ್ಥೆಗಳು ಗುತ್ತಿಗೆ ಕಾಮಗಾರಿ ಭಾಗಶಃ ಪೂರ್ಣಗೊಂಡಿರುವಷ್ಟರ ಮಟ್ಟಿಗೆ ಬ್ಯಾಂಕ್ ಗ್ಯಾರಂಟಿಗಳನ್ನು ಬಿಡುಗಡೆ ಮಾಡಲಿವೆ



# ರೇರಾ ಅಡಿಯಲ್ಲಿ ರಿಯಲ್ ಎಸ್ಟೇಟ್ ಯೋಜನೆಗಳ ನೋಂದಣಿ ಮತ್ತು ಪೂರ್ಣಗೊಳಿಸುವ ದಿನಾಂಕ ವಿಸ್ತರಣೆ


- ಕೋವಿಡ್ ನ ಪ್ರತೀಕೂಲ ಪರಿಣಾಮ ಮತ್ತು ಪ್ರಾಜೆಕ್ಟ್ ನಿಂತಿರುವುದರಿಂದ ರೇರಾ ಟೈಮ್ ಲೈನ್‌ಗಳಲ್ಲಿ ಡೀಫಾಲ್ಟ್ ಆಗುವುದರಿಂದ ತೊಂದರೆ ಆಗುತ್ತದೆ. ಹೀಗಾಗಿ ಅವಧಿ ವಿಸ್ತರಿಸಬೇಕಾಗಿದೆ.
- ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಮತ್ತು ಅವುಗಳ ನಿಯಂತ್ರಿತ ಪ್ರಾಧಿಕಾರಗಳಿಗೆ ಈ ಕೆಳಗಿನ ಪರಿಮಾಣದ ಸಲಹೆ ಮಾಡುತ್ತದೆ:
  - ಕೋವಿಡ್-19 ಅನ್ನು ರೇರಾ ಅಡಿಯಲ್ಲಿ ‘ಫೋರ್ಸ್ ಮೆಜೂರ್’ ನ ಘಟನೆಯಾಗಿ ಪರಿಗಣಿಸಿ.
  - ವೈಯಕ್ತಿಕ ಅರ್ಜಿಗಳಿಲ್ಲದೆ 2020 ಮಾರ್ಚ್ 25 ರಂದು ಅಥವಾ ನಂತರ ಮುಕ್ತಾಯಗೊಳ್ಳುವ ಎಲ್ಲಾ ನೋಂದಾಯಿತ ಯೋಜನೆಗಳಿಗೆ ನೋಂದಣಿ ಮತ್ತು ಪೂರ್ಣಗೊಳಿಸುವ ದಿನಾಂಕವನ್ನು ಸ್ವಯಂ 6 ತಿಂಗಳವರೆಗೆ ವಿಸ್ತರಿಸಿ.
  - ನಿಯಂತ್ರಕ ಅಧಿಕಾರಿಗಳು ಅಗತ್ಯವಿದ್ದರೆ ಇದನ್ನು ಇನ್ನೂ 3 ತಿಂಗಳವರೆಗೆ ವಿಸ್ತರಿಸಬಹುದು
  - ಪರಿಷ್ಕೃತ ಕಾಲ ಸೂಚಿಗಳೊಂದಿಗೆ ಹೊಸ ‘ಪ್ರಾಜೆಕ್ಟ್ ನೋಂದಣಿ ಪ್ರಮಾಣಪತ್ರಗಳನ್ನು’ ಸ್ವಯಂಚಾಲಿತವಾಗಿ ನೀಡಿ.
  - ಏಕಕಾಲದಲ್ಲಿ ರೇರಾ ಅಡಿಯಲ್ಲಿ ವಿವಿಧ ಪ್ರತಿಮೆ ಅನುಸರಣೆಗಾಗಿ ಕಾಲ ಸೂಚಿಯನ್ನು ವಿಸ್ತರಿಸಿ.

ಈ ಕ್ರಮಗಳು ರಿಯಲ್ ಎಸ್ಟೇಟ್ ಡೆವಲಪರ್ ಗಳ ಒತ್ತಡವನ್ನು ನಿವಾರಿಸುತ್ತದೆ ಮತ್ತು ಯೋಜನೆಗಳನ್ನು ಪೂರ್ಣಗೊಳಿಸುವುದನ್ನು ಖಚಿತಪಡಿಸುತ್ತದೆ ಇದರಿಂದ ಗೃಹ ಖರೀದಿದಾರರು ತಾವು ಬುಕ್ ಮಾಡಿದ ಮನೆಗಳನ್ನು ಹೊಸ ಕಾಲಸೂಚಿಗಳೊಂದಿಗೆ ಪಡೆಯಲು ಸಾಧ್ಯವಾಗುತ್ತದೆ..



# ಟಿಡಿಎಸ್/ಟಿಸಿಎಸ್ ದರ ಕಡಿತದ ಮೂಲಕ ರೂ. 50,000 ಕೋಟಿ ಹಣಹರಿವು

- ತೆರಿಗೆದಾರರ ವಿಲೇವಾರಿಗೆ ಹೆಚ್ಚಿನ ಹಣವನ್ನು ಒದಗಿಸುವ ಸಲುವಾಗಿ, ನಿವಾಸಿಗಳ ಸಂಬಳವಿಲ್ಲದ ನಿರ್ದಿಷ್ಟ ಪಾವತಿಗಳಿಗೆ ಮೂಲದಲ್ಲಿಯೇ ಕಡಿತ ಮಾಡಿದ ತೆರಿಗೆ (ಟಿಡಿಎಸ್) ದರಗಳನ್ನು  ಮತ್ತು ನಿಗದಿತ ಸ್ವೀಕೃತಿಗಾಗಿ ಮೂಲದಲ್ಲಿ ತೆರಿಗೆ ಸಂಗ್ರಹದ ದರಗಳು (ಟಿಸಿಎಸ್) ಅಸ್ತಿತ್ವದಲ್ಲಿರುವ ದರದ ಶೇ. 25 ಕಡಿಮೆ ಮಾಡಲಾಗಿದೆ.
- ಗುತ್ತಿಗೆ, ವೃತ್ತಿಪರ ಸಂಭಾವನೆ, ಬಡ್ಡಿ, ಬಾಡಿಗೆ, ಲಾಭಾಂಶ, ಕಮಿಷನ್, ದಲ್ಲಾಳಿ ಹಣ ಇತ್ಯಾದಿ ಪಾವತಿ ಈ ಟಿಡಿಎಸ್ ಕಡಿತ ದರಕ್ಕೆ ಅನ್ವಯಿಸುತ್ತದೆ.
- ಈ ಕಡಿತ 2020-21ನೇ ಹಣಕಾಸು ವರ್ಷದ ಉಳಿದ ಅವಧಿಗೆ ಅನ್ವಯಿಸುತ್ತದೆ. ಅಂದರೆ ನಾಳೆಯಿಂದ 2021ರ ಮಾರ್ಚ್ 31ರವರೆಗೆ
- ಈ ಕ್ರಮವು 50,000 ಕೋಟಿ ರೂ. ಹಣ ಹರಿವಿಗೆ ಕಾರಣವಾಗುತ್ತದೆ.



# ಇತರ ನೇರ ತೆರಿಗೆ ಕ್ರಮಗಳು

- ಧರ್ಮ ದತ್ತಿ ಮತ್ತು ಮಾಲೀಕತ್ವ, ಪಾಲುದಾರಿಕೆ, ಎಲ್.ಎಲ್.ಪಿ ಮತ್ತು ಸಹಕಾರಸಂಘಗಳ ಸಾಂಸ್ಥಿಕೇತರ ವಾಣಿಜ್ಯ ಮತ್ತು ವೃತ್ತಿಪರರ ಎಲ್ಲ ಬಾಕಿ ಮರುಪಾವತಿಯನ್ನು ತಕ್ಷಣವೇ ಮಾಡಲಾಗುತ್ತದೆ.
- 2019-20ನೇ ಹಣಕಾಸು ವರ್ಷದ ಎಲ್ಲ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆ ಕೊನೆಯ ದಿನವನ್ನು 2020ರ ಜುಲೈ 31 ಮತ್ತು 2020ರ ಅಕ್ಟೋಬರ್ 31ರಿಂದ 2020ರ ನವೆಂಬರ್ 30 ಮತ್ತು ತೆರಿಗೆ ಲೆಕ್ಕ ಪರಿಶೋಧನೆಯನ್ನು 2020ರ ಸೆಪ್ಟೆಂಬರ್ 30ರಿಂದ 2020ರ ಅಕ್ಟೋಬರ್ 31ಕ್ಕೆ ವಿಸ್ತರಿಸಲಾಗಿದೆ.



# ಇತರ ನೇರ ತೆರಿಗೆ ಕ್ರಮಗಳು

- **2020 ರ ಸೆಪ್ಟೆಂಬರ್ 30 ರಂದು ಸಲ್ಲಿಸಬೇಕಾದ ನಿರ್ಧರಣೆಯ ದಿನಾಂಕವನ್ನು ಡಿಸೆಂಬರ್ 31, 2020 ಕ್ಕೆ ವಿಸರಿಸಲಾಗಿದೆ ಮತ್ತು 2021 ರ ಮಾರ್ಚ್ 31 ಕ್ಕೆ ಸಲ್ಲಿಕೆ ಇರುವವರಿಗೆ 2021 ಸೆಪ್ಟೆಂಬರ್ 30 ಕ್ಕೆ ವಿಸ್ತರಿಸಲಾಗುತ್ತದೆ.**
- **ಹೆಚ್ಚುವರಿ ಮೊತ್ತವಿಲ್ಲದೆ ಪಾವತಿ ಮಾಡಲು ಅವಕಾಶ ನೀಡಲಾಗಿದ್ದ ವಿವಾಧ್ ಸೆ ವಿಶ್ವಾಸ್ ಯೋಜನೆಯ ಅವಧಿಯನ್ನು 2020ರ ಡಿಸೆಂಬರ್ 31ರವರೆಗೆ ವಿಸ್ತರಿಸಲಾಗಿದೆ.**



# ಧನ್ಯವಾದಗಳು